ಹಿಡಿದುಕೊಂಡು ವೆಂಕಮ್ಮನ ಮುಂದೆ ಚಾಚಿ 'ಹೇಳಿ, ಇದನ್ನು ಮುಟ್ಟಿ ಹೇಳಿ. ಉಂಗುರ ಕದಿಯಲಿಲ್ಲ ಎಂದು' ಎಂದು ಕೂಗಿದಾಗ, ವೆಂಕಮ್ಮನಿಗೆ ದುಃಖದ ಬದಲು ರೋಷ ಉಕ್ಕಿಬಂತು. ಒಮ್ಮೆಲೆ ಸೀರೆಯ ಸೆರಗನ್ನು ಕೈಯಲ್ಲಿ ಹಿಡಿದು ಸೊಂಟಕ್ಕೆ ಬಿಗಿದು ಕಟ್ಟಿ ನಿಂತು ಅಬ್ಬರಿಸಿದರು. 'ಏನೋ, ಏನಂತ ಮಾಡಿದ್ದಿ? ನಿನ್ನ ಮಗಳ ಮದುವೆ ಮಾಡಿ ನನಗೆ ಇಷ್ಟು ಅವಮಾನ ಮಾಡ್ಬೇಕು ಅಂತ ನನ್ನ ಇಲ್ಲಿಗೆ ಕರೆಸಿದ್ಯಾ? ನನ್ನನ್ನು ಜೀವಂತ ಹೊಂಡ ತೆಗೆದು ಹುಗಿಯಬೇಕು ಅಂತ ಮಾಡಿದ್ಯೇನೋ. ನಿನ್ನ ಬುದ್ಧಿ ಗೊತ್ತಿದ್ದೂ ಗೊತ್ತಿದ್ದು ಹಿಂದಿನದ್ದೆಲ್ಲ ಮರೆತು, ಆ ಹೆಣ್ಣಿಗೆ ಒಂದು ಆಶೀರ್ವಾದ ಮಾಡಿ ಹೋಗುವ ಅಂತ ಬಂದೆನಲ್ಲೋ, ನನಗೆ ಸರಿಯಾಗಿ ಮಂಗಳಾರತಿ ಮಾಡಿದ್ಯಲ್ಲ. ಆದರೆ ಇದು ಇಷ್ಟಕ್ಕೇ ಮುಗೀತು ಅಂತ ತಿಳೀಬ್ಯಾಡ. ನನಗೆ ಇಂದು ಮಾಡಿದ ಅವಮಾನಕ್ಕೆ ನಿನಗೆ ಶಿಕ್ಷೆ ಆಗಿಯೇ ಆಗುತ್ತದೆ' ಎಂದು ಒಂದೇ ಉಸಿರಿನಲ್ಲಿ ಒರಲುತ್ತಾ ಹುಚ್ಚು ಆವೇಶದಿಂದ ಎದುರಿಗಿದ್ದವರನ್ನು ದೂಡಿಕೊಂಡು ಅಂಗಳ ಇಳಿದು ಹೊರಟೇ ಬಿಟ್ಟರು. ಅವರ ಕಣ್ಣು ಕೆಂಡದ ಉಂಡೆಯಾಗಿತ್ತು. ಅವರ ಅವತಾರವನ್ನು ಕಂಡು, ತಡೆಯುವ ಧೈರ್ಯ ಅಲ್ಲಿ ಯಾರಿಗೂ ಇರಲಿಲ್ಲ.

ಓಡಿಕೊಂಡೇ ಮನೆಗೆ ಬಂದ ವೆಂಕಮ್ಮನಿಗೆ ಮೈಮೇಲೆ ಜ್ಞಾನವೇ ಇದ್ದಂತಿರಲಿಲ್ಲ. ಏದುಸಿರು ಬಿಡುತ್ತಾ ಚಾವಡಿಯನ್ನು ಏರಿ ಗಂಡನ ಭಾವ ಚಿತ್ರದ ಮುಂದೆ ಮಂಡಿಯೂರಿ ಕುಳಿತು, 'ಕಂಡ್ರ್ಯಾ? ಕಂಡ್ರ್ಯಾ? ಇವತ್ ಬೆಳಿಗ್ಗೆ ಹೇಳಿದ್ನಲೆ. ನಾನು ಬತ್ತಿಲ್ಲೆ ಸ್ವಲ್ಪ ದಿನ ಇರ್ತೆ ಜಂಬ್ರ ಇತ್ತು ಅಂತ. ಸಾಕು. ಇನ್ನೂ ಯಾಕೆ ಬದ್ಕಿ ಇಪ್ಪುದ್? ನನ್ನನ್ನೂ ಬೇಗ ಕರ್ಕಂಡ್ ಹೋಯ್ನಿ. ನಂಗ್ ಈ ಜನ್ಮವೇ ಸಾಕ್. ಇನ್ನು ಈ ಜನ್ಮದಲ್ಲಿ ನಾನು ಯಾರಿಗೂ ಮುಖ ತೋರ್ಸುಕಿತ್ತಾ? ಇಷ್ಟು ದಿನ ಬದುಕಿದ್ದು ಇಂತಹ ಅವಮಾನವನ್ನು ಅನುಭವಿಸುವದಕ್ಕೆ ಅಂತ ಆಯಿತಲ್ಲ ನಾನ್ ಬರ್ತೆ, ನನ್ನನ್ ಕರ್ಕಂಡ್ ಹೋಯ್ನಿ ಕರ್ಕಂಡ್ ಹೋಯ್ನಿ' ಎಂದು ನೆಲಕ್ಕೆ ಬಾಗಿ ಹಣೆಯನ್ನು ಮತ್ತೆ ಮತ್ತೆ ಬಡಿದುಕೊಂಡು ಗೋಳಾಡಿದರು. ಕೊನೆಗೆ ಬಳಲಿಕೆಯಿಂದ ಎಂಬಂತೆ ಹಾಗೆಯೇ ಕುಸಿದು ಒಂದು ಬದಿಗೆ ಬಾಗಿ ಮಲಗಿಕೊಂಡರು. ಸೊಸೆ ಅದನ್ನು ಕಂಡು ಗಾಬರಿಯಾಗಿ ಚಾವಡಿಗೆ ಓಡಿಬಂದು, 'ಏನಾಯ್ತು ಅತ್ತೇ? ಯಾಕೆ ಹಾಂಗ್ ಮಲ್ಕಂಡಿದ್ರಿ? ಏಳಿ ಏಳಿ. ನಂಗೆ ಹೆದರಿಕೆ ಆತ್' ಎಂದು ಹತ್ತಿರ ಬಂದು ಅಳುತ್ತಾ ಹೇಳಿದಾಗ, ಅವಳನ್ನು ಸಿಟ್ಟಿನಿಂದ ದುರುಗುಟ್ಟಿ ನೋಡಿದ ವೆಂಕಮ್ಮ,'ದೂರ ಹೋಗು, ನನ್ನನ್ನು ಮುಟ್ಟಬ್ಯಾಡ. ದೂರ ಹೋಗು. ನಾನು ಈಗ ಒಬ್ಬೇ ಇರ್ಕ್. ಮಾತಾಡಿಸ್ಬ್ಯಾಡ ಹೋಗು' ಎಂದು ಕಣ್ಣು ಕೆಂಪು ಮಾಡಿಕೊಂಡು ಅಬ್ಬರಿಸಿದರು.

ವೆಂಕಮ್ಮನ ಸ್ಥಿತಿಯನ್ನು ನೋಡಿ ಅವಳಿಗೆ ಹೆದರಿಕೆಯಾಗಿ ಹಿಂದೆ ಹಿಂದೆ ಹೋದವಳು, ಅತ್ತೆಯ ಮನಸ್ಸಿಗೆ ಶಾಂತಿ ಸಿಗುವುದಾದರೆ ಹಾಗೆ ಮಲಗಿರಲಿ ಎಂದುಕೊಂಡಳು. ಬೆಳಿಗ್ಗೆಯಿಂದ ಕೆಲಸ ಮಾಡಿ ಸುಸ್ತಾಗಿದ್ದ ಅವಳು ಅಲ್ಲಿಯೇ ಜಗಲಿಯ ಮೇಲೆ ಒಂದು ಗೋಣಿಯ ಚೀಲವನ್ನು ಗೋಡೆಗೆ ಆನಿಸಿ ತಲೆದಿಂಬು ಮಾಡಿಕೊಂಡು ಒರಗಿಕೊಂಡಳು. ಹಾಗೇ ಜೊಂಪು ಹತ್ತಿತು. ಮತ್ತೆ ಎಚ್ಚರಾಗಿ ಅತ್ತೆಯನ್ನು ಕಂಡದ್ದು ಮುಸ್ಸಂಜೆಯ ಕತ್ತಲಾಗುವ ಹೊತ್ತಿಗೆ.

ಅತ್ತ ಇಂತಹ ಒಂದು ಅಹಿತಕರ ಘಟನೆ ನಡೆದದ್ದರಿಂದ ಮದುವೆಯ ಮನೆಯ ಸಂಭ್ರಮವೇ ಹಾಳಾಗಿಹೋಗಿತ್ತು. ಯಾರಿಗೂ ಉತ್ಸಾಹವೇ ಇರಲಿಲ್ಲ. ಅಂತೂ ಸೀತಾರಾಮಯ್ಯ ಮದುವೆಗೆ ಬಂದ ನೆಂಟರನ್ನೆಲ್ಲ ಕಳಿಸಿ, ಮಗಳನ್ನು ಗಂಡನ ಮನೆಗೆ ಕಳುಹಿಸಿ ಕೊಟ್ಟು, 'ಅಯ್ಯಬ್ಬ ಅಂತೂ ಮುಗಿಯಿತಲ್ಲ' ಎಂದು ಸ್ವಲ್ಪ ಒರಗಿದರು. ಸಂಜೆ ಕತ್ತಲು ಕವಿಯುವ ಹೊತ್ತಿಗೆ ಎದ್ದು, ಮನೆಯ